'ಅಲ್ಲಿಂದ ಒರಸುತ್ತಾ ಬಾ' ಎಂದ. ತನ್ನ ಹಾಗೇ ಈತನೂ ಇನ್ಮುಂದೆ ಇಲ್ಲಿಯ ಕೆಲಸದವನು, ಸೀನಿಯರ್ ಆಗಿರುವ ತಾನು ಹೇಳಿದ್ದನ್ನು ಮಾಡಬೇಕು ಎನ್ನುವ ಭಾವನೆ ಆತನ ಮಾತಿನ ಧಾಟಿಯಲ್ಲಿತ್ತು. ದೀಪಕನ ಆತ್ಮಾಭಿಮಾನ ಒಪ್ಪಲಿಲ್ಲ. ಸುಮ್ಮನೆ ನಿಂತ.

'ಏನು ಹಾಗೇ ನಿಂತಿದ್ದೀ? ಅಲ್ಲಿಂದ ಶುರು ಮಾಡು' ಅಬ್ದುಲ್ಲ ಅಧಿಕಾರಯುತವಾಗಿ ನುಡಿದ ಇನ್ನೊಮ್ಮೆ.

'ಗಾಡಿತೊಳೆಯಲು ಬಂದವನಲ್ಲ. ಗಿಡುಗಸಾಕಣೆ ಅಸಿಸ್ಟೆಂಟ್ ಹುದ್ದೆಗೆ ಬಂದವ ನಾನು' ಎಂದ ದೀಪಕ್ ಗಂಭೀರವಾಗಿ.

ಅಬ್ದುಲ್ಲ ನಕ್ಕ. 'ಇಲ್ಲಿ ಎಲ್ಲ ಒಂದೇ. ಆತ ಅರಬಾಬ್, ನಾವು ಕೆಲಸದವರು. ಅದು ಮಾಡುವುದಿಲ್ಲ, ಇದು ನನ್ನ ಕೆಲಸವಲ್ಲ ಅಂದೀಯಾದರೆ ಬಹಳ ದಿನ ಮುಂದುವರೆಯುವುದಿಲ್ಲ ನೀನು' ಎಂದ ತಿರಸ್ಕಾರದಿಂದ.

'ಕೆಲಸ ಏನು, ಹೇಗೆ, ಎಲ್ಲಿ... ಎನ್ನುವ ಯಾವ ವಿಷಯವೂ ನಿಗದಿಯಾಗಿಲ್ಲ. ಮುಖ್ಯವಾಗಿ ಸಂಬಳ ಎಷ್ಟು ಅನ್ನುವುದೇ ಇನ್ನೂ ಖಾತ್ರಿಯಾಗಿಲ್ಲ. ಇವತ್ತು ಬರಲು ಹೇಳಿದ್ದಾರೆ, ಬಂದಿದ್ದೇನೆ ಅಷ್ಟೆ' ಅಂದ ದೀಪಕ್.

ಅಬ್ದುಲ್ಲ ನಗುತ್ತ ಮೆಟ್ಟಿಲಿಳಿದು ಬಂದ. 'ನಾಳೆ ಬೆಳಿಗ್ಗೆ ಬಾ... ಎಂದು ಆತ ಹೇಳಿದಾಗಲೇ ಎಲ್ಲವೂ ನಿರ್ಧಾರವಾದಂತೆಯೇ... ನಿನ್ನನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದಾನೆ ಎಂತಲೇ ಅರ್ಥ. ಸಂಬಳ ಎಷ್ಟು ಎಂದು ಆತ ಮುಂದಕ್ಕೆ ನಿರ್ಧರಿಸುತ್ತಾನೆ. ನಿರ್ಧರಿಸುವುದೇನು ಬಂತು, ಕೈಯಲ್ಲಿದ್ದಾಗ ಕೊಡುತ್ತಾನೆ, ಅದೂ ನಿನ್ನ ಕೆಲಸ ನೋಡಿ. ಅದಕ್ಕೆ ನಿನ್ನಲ್ಲಿ ಸಮಾಲೋಚನೆ ಮಾಡುತ್ತಾನೆ ಎಂದೆಣಿಸಿದೆಯಾ? ಇದೇನು ಸರ್ಕಾರಿ ಕೆಲಸವಾ? ಕಂಪೆನಿ ಕೆಲಸವಾ? ಐದು ವರ್ಷವಾಯಿತು, ಇಷ್ಟು ಸಂಬಳ ಅಂತ ನನಗೆ ತಿಂಗಳು ಪ್ರಕಾರ ಆತ ಕೊಟ್ಟದ್ದಿಲ್ಲ. ಆಗಾಗ ಅಷ್ಟೋ ಇಷ್ಟೋ ಕೊಟ್ಟದ್ದನ್ನು ತೆಗೆದುಕೊಂಡು ದುಡಿಯುತ್ತಿದ್ದೇನೆ. ಅಷ್ಟಾದರೂ ಖರ್ಚುವೆಚ್ಚಕ್ಕೆ ಸಿಗುತ್ತಿದೆಯಲ್ಲ ಎಂದೇ ಅಧಿಕಪ್ರಸಂಗ ಮಾಡದೆ ಸುಮ್ಮನಿದ್ದೇನೆ. ನಿನ್ನ ಹಣಕಾಸು ಸ್ಥಿತಿಗತಿ ಸಂಕಟ ನನಗೆ ಗೊತ್ತಿಲ್ಲ. ಯಾವುದಕ್ಕೂ ನೋಡಿಕೊಂಡು ಅವರಲ್ಲಿ ಮಾತಾಡು' ಎಂದ.

'ಸಂಬಳ ನಿರ್ಧಾರವಾಗದೆ ನಾನು ಕೆಲಸಕ್ಕೆ ಸೇರುವುದಿಲ್ಲ' ದೀಪಕ್ ದೃಢವಾಗಿ ಹೇಳಿದ.

'ಅದು ನಿನ್ನಿಷ್ಟ. ಸಮಯ ನೋಡಿಕೊಂಡು ಕೇಳು. ಬೆಳಿಗ್ಗೆ ಬೆಳಿಗ್ಗೆ ಎದುರು ಸಿಕ್ಕಿದ ಕೂಡಲೇ ಕೇಳಿಬಿಡಬೇಡ... ನನಗೆ ಅವರ ಸ್ವಭಾವ ಗೊತ್ತಿದ್ದುದರಿಂದ ಹೇಳಿದ್ದು. ಇನ್ನು ನಿನಗೆ ಬಿಟ್ಟದ್ದು' ಎಂದು ಹೇಳಿ ಉತ್ತರಕ್ಕೂ ಕಾಯದೆ ಹೊರಟು ಹೋದ.

ದೀಪಕನಿಗೆ ಸಮಸ್ಯೆಗಿಟ್ಟುಕೊಂಡಿತು. ಈಗೇನು ಮಾಡುವುದು? ಹೇಗೂ ಬಂದಾಗಿದೆ. ಇವತ್ತು ಆತನೇ ಹೇಳದಿದ್ದರೆ ಸಮಯನೋಡಿ ಸಂಬಳ ಎಷ್ಟು ಅಂತ ಕೇಳಿಯೇ ಬಿಡಬೇಕು. ಆತ ಇವತ್ತೂ ಹೇಳದಿದ್ದರೆ ನಾಳೆಯಿಂದ ಬರದಿದ್ದರಾಯಿತು ಅಂದುಕೊಂಡ. ಅಬ್ದುಲ್ಲನೂ ಒಳಗೆ ಹೋಗಿದ್ದರಿಂದ ಮುಂದೇನು ಮಾಡುವುದು ಎಂದು ತೋಚದೆ ಅಲ್ಲಿಯೇ ನಿಂತುಕೊಂಡ.

ಹತ್ತಿಪ್ಪತ್ತು ನಿಮಿಷ ಕಳೆದಿತ್ತು. ಸೂರ್ಯ ಮೂಡಲಲ್ಲಿ ಪ್ರಕಟಗೊಳ್ಳುತ್ತ ಮೇಲೆದ್ದು ಬಂದಿದ್ದ. ಶುಭ್ರ ಬಿಳಿ ನಿಲುವಂಗಿ ತೊಟ್ಟು ಗಿಡುಗ ಗಾದಾಳನ್ನು ಕೈಯಲ್ಲಿ ಕೂರಿಸಿಕೊಂಡು ಅರಬಿ ಮನೆಯಿಂದ ಹೊರಗೆ ಬಂದ. ಹಿಂದೆಯೇ ಓಡಿಬಂದ ಅಬ್ದುಲ್ಲ ನಾಲ್ಕಾರು ಚೀಲಗಳನ್ನು ಎಸ್ ಯೂ ವಿಯ ಡಿಕ್ಕಿಯಲ್ಲಿ ಪೇರಿಸಿಟ್ಟು ವಾಹನದ ಬಾಗಿಲು ತೆರೆದು ನಿಂತ.